# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗ,
ವಾರ್ಡ್ ನಂ.30, ಹೇರೋಹಳ್ಳಿ, ಬೆಂಗಳೂರು-560091.

---

ದಿನಾಂಕ : 28-11-2022

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.30ರಲ್ಲಿ ದಿನಾಂಕ 24.11.2022 ರಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಹಾಜರಾಗಿದ್ದವರ ವಿವರಗಳ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 01 | ಶ್ರೀ ಶ್ರೀನಿವಾಸಯ್ಯ | ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು. |
| 02 | ಶ್ರೀ ನಟರಾಜ್.ಎನ್ | ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿ ವಾರ್ಡ್.72 ಹೇರೋಹಳ್ಳಿ. |
| 03 | ಶ್ರೀ ಹನುಮಂತರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು |
| 04 | ಶ್ರೀ ರಾಹುಲ್.ಡಿ.ಸೇಠ್ | ಸಹಾಯಕ ಅಭಿಯಂತರರು(ಆಐಎಂಎಸ್) |
| 05 | ಶ್ರೀ ಲಕ್ಷ್ಮೀಕಾಂತ್.ಜಿ.ಪಿ | ಕಿರಿಯ ಅಭಿಯಂತರರು (ಬೆಸ್ಕಾಂ) |
| 06 | ಶ್ರೀ ಚಂದನ್.ಎಂ.ಎನ್ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 07 | ಶ್ರೀ ಮಹದೇವಯ್ಯ.ಬಿ | ಕಿರಿಯ ಆರೋಗ್ಯ ಪರಿವೀಕ್ಷಕರು |
| 08 | ಶ್ರೀ ವೆಂಕಟೇಶ್ ಕುಮಾರ್ | ಪೊಲೀಸ್ ಇಲಾಖೆ |
| 09 | ಶ್ರೀ ಧನಂಜಯ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 10 | ಶ್ರೀ ರಮೇಶ್ | ಒಳಚರಂಡಿ |
| 11 | ಶ್ರೀ ಕೃಷ್ಣೇಗೌಡ | ಎಸ್.ಎಂ.ವಿ 6ನೇ ಹಂತ |
| 12 | ಶ್ರೀ ಅರವಿಂದ್ | ಎಸ್.ಎಂ.ವಿ 6ನೇ ಹಂತ |
| 13 | ಶ್ರೀ ಮುದ್ದಪ್ಪ | ಸದಸ್ಯರು |
| 14 | ಶ್ರೀ ಧನಂಜಯ್.ಬಿ.ಆರ್ | ಸದಸ್ಯರು |
| 15 | ಶ್ರೀ ಸೋಮಶೇಖರ್ | ತೋಟಗಾರಿಕೆ |
| 16 | ಶ್ರೀ ನಾಗೇಶ್ | ಅಂಗನವಾಡಿ ನಿವಾಸಿ |

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ. ಶ್ರೀನಿವಾಸಯ್ಯ ರವರ ಉಪಸ್ಥಿತಿಯಲ್ಲಿ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಎನ್.ನಟರಾಜ್ ರವರು ಸಭೆಗೆ ಹಾಜರಿದ್ದ ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ, ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯಗಳ ಬಗ್ಗೆ ತಿಳಿಸಿದರು.

**1.ಆರೋಗ್ಯ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು:-**

- ಶ್ರೀ ಮಹದೇವ್ ಆರೋಗ್ಯ ನಿರೀಕ್ಷಣಾಧಿಕಾರಿಗಳು ಸಭೆಯಲ್ಲಿ ಮಾತನಾಡುತ್ತಾ, ವಾರ್ಡ್ ನಂ.30ರ ಪ್ರದೇಶದಲ್ಲಿ ಎಂದಿನಂತೆ ನಾಗರಿಕರಿಗೆ ವ್ಯಾಕ್ಸಿನ್‌ಗಳನ್ನು ಹಾಕಲಾಗುತ್ತಿದೆ.
- ವಾರ್ಡ್ ವ್ಯಾಪ್ತಿಯಲ್ಲಿ ಕೊರೋನ ಕೋವಿಡ್-19 ಪ್ರಕರಣವು ಕಂಡುಬಂದಿರುವುದಿಲ್ಲ.
- ವಾರ್ಡ್ ವ್ಯಾಪ್ತಿಯಲ್ಲಿ ಪಾಸಿಟಿವ್ ಪ್ರಕರಣವು ಕಂಡುಬಂದಲ್ಲಿ ಅವರಿಗೆ ಸೂಕ್ತ ಚಿಕಿತ್ಸೆ ಕೊಡಲಾಗುವುದು ಎಂಬ ಮಾಹಿತಿಯನ್ನು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಆಶಾ ಕಾರ್ಯಕರ್ತೆಯರು ಪ್ರತಿ ಮನೆ ಮನೆಗೆ ಭೇಟಿ ನೀಡಿ ನಾಗರಿಕರ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ಗುರುವಾರದಂದು 0-5 ವರ್ಷದ ಮಕ್ಕಳಿಗೆ ವ್ಯಾಕ್ಸಿನ್ ಹಾಕಲಾಗುತ್ತಿದೆ.

- ವಾರ್ಡ್ ವ್ಯಾಪ್ತಿಯಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲಾರಿಗೂ ವಾಕ್ಸಿನ್‌ಗಳನ್ನು ಹಾಕಲಾಗುತ್ತಿದೆ. ಮತ್ತು ಭೂಸ್ಟರ್ ಡೋಸ್ ಲಸಿಕೆಯನ್ನು ಸಹ ಹಾಕಲಾಗುತ್ತಿದೆ.
- ವಾರ್ಡ್ ವ್ಯಾಪ್ತಿಯಲ್ಲಿ ಎಂದಿನಂತೆ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮವು ಅನುಷ್ಠಾನಗೊಳ್ಳುತ್ತಿದೆ.

**2. ಘನತ್ಯಾಜ್ಯ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು:-**

- ವಾರ್ಡ್ ವ್ಯಾಪ್ತಿಯಲ್ಲಿ ಕಸ ಸಂಗ್ರಹಿಸುವ ವಾಹನಗಳು ಪ್ರತಿ ಮನೆಮನೆಯ ಹತ್ತಿರ ಹೋಗಿ ಕಸ ಸಂಗ್ರಹಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಮನೆಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಇನ್ನು 28 ಕಸದ ಸಂಗ್ರಹಿಸುವ ಆಟೋಗಳು ಬೇಕಾಗಿರುತ್ತದೆ.
- ಮಾಗಡಿ ಮುಖ್ಯರಸ್ತೆಯ ಪೈಪ್ ಲೈನ್ ರಸ್ತೆಯ ಹತ್ತಿರ ಕಸದ ರಾಶಿಯು ಹೆಚ್ಚಾಗಿ ಇರುವುದರಿಂದ ಸಾರ್ವಜನಿಕರಿಗೆ ರಸ್ತೆಯಲ್ಲಿ ಓಡಾಡಲು ಬಹಳ ಅನಾನುಕೂಲವಾಗುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

**3. ಬೆಸ್ಕಾಂ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು:-**

- ಬೆಸ್ಕಾಂ ಅಧಿಕಾರಿಯಾದ ಶ್ರೀ ವಸಂತ್ ಕುಮಾರ್ ರವರು ಸಭೆಗೆ ಹಾಜರಾಗುವಂತೆ ನೋಡಲ್ ಅಧಿಕಾಗಳು ತಿಳಿಸಿದರು.
- ಜವರೇಗೌಡ ಬಡಾವಣೆಯಲ್ಲಿ ಕೇಬಲ್ ಆಗಿಲ್ಲವೆಂದು ಸಭೆಯಲ್ಲಿ ಚರ್ಚಿಸಿದರು.

**4. ಬೀದಿದೀಪ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು:-**

- ವಾರ್ಡ್ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಹೊಸದಾಗಿ ಬೀದಿದೀಪಗಳು ಬೇಕಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಬೀದಿದೀಪ ನಿರ್ವಹಣೆಯ ಅಧಿಕಾರಿಗಳು ಯಾವುದೇ ಕಂಪ್ಲೇಟ್ ಬಂದರೂ ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿದರು.

**5. ಕಾಮಗಾರಿ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು:-**

- ಮಾಗಡಿ ಮುಖ್ಯರಸ್ತೆಯ ಪೈಪ್ ಲೈನ್ ರಸ್ತೆಯ ಹತ್ತಿರ ರಸ್ತೆಯು ಹಾಳಾಗಿರುವ ಬಗ್ಗೆ ತಿಳಿಸಿದರು.
- ಕಾಮಗಾರಿ ಇಲಾಖೆಯವರು ರಸ್ತೆಗೆ ಡಾಂಬರೀಕರಣ ಮಾಡುವಾಗ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಂದ ಎನ್.ಓ.ಸಿ ಪಡೆಯದೇ ರಸ್ತೆಗೆ ಡಾಂಬರೀಕರಣ ಮಾಡುತ್ತಿರುವುದು. ಡಾಂಬರೀಕರಣ ಮಾಡಿದ ನಂತರ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ನೀರನ್ನು ಬಿಡುವುದರಿಂದ ರಸ್ತೆಯಲ್ಲಿ ನೀರು ಲೀಕ್ ಆಗುತ್ತಿದೆ. ಆದ್ದರಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ನೀರನ್ನು ಬಿಟ್ಟಿ ಪರಿಶೀಲಿಸಿದ ನಂತರ ಕಾಮಗಾರಿ ಇಲಾಖೆಯವರು ಡಾಂಬರೀಕರಣ ಮಾಡಬೇಕೆಂದು ಸಭೆಯಲ್ಲಿ ತಿಳಿಸಿದರು.
- ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಕೆಲಸ ಪೂರ್ಣಗೊಂಡ ನಂತರ ರಸ್ತೆಗೆ ಡಾಂಬರೀಕರಣ ಮಾಡಬೇಕೆಂದು ಸಭೆಯಲ್ಲಿ ತಿಳಿಸಿದರು.

**6. ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು**

- ದ್ವಾರಕಾವಾಸದ ಸಮಾನಾಂತರ ರಸ್ತೆಯಲ್ಲಿ ದೊಡ್ಡದಾದ ಹಳ್ಳದ ಗುಂಡಿ ಇದ್ದು, ಇದರಿಂದ ಅಪಘಾತ ಸಂಬಂವಿಸುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆ ಗುಂಡಿಯನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು wet mix ಹಾಕಿ ಮುಚ್ಚಿಕೊಡುವಂತೆ ಸಭೆಯಲ್ಲಿ ಹೇಳಿದರು.
- ವೀರಭದ್ರೇಶ್ವರ ನಗರದಲ್ಲಿ ಕೆಲಸವನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿರವರು ನಿಧಾನಗತಿಯಲ್ಲಿ ಮಾಡುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

Scanned with OKEN Scanner

- ಬಿ.ಡಬ್ಲ್ಯೂ.ಎಸ್.ಎಸ್.ಬಿರವರ ಒಳಚರಂಡಿ ಕಾಮಗಾರಿ ಕೆಲಸವು ಬಹಳಷ್ಟು ಕಡೆ ಪೂರ್ಣಗೊಳಿಸಿರುವುದಿಲ್ಲ ಅದನ್ನು ಪೂರ್ಣಗೊಳಿಸುವಂತೆ ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಎಲ್ & ಟಿ ರವರು ಭೂಗತ ಕೇಬಲ್ ಅಳವಡಿಸಲು ರಸ್ತೆಯಲ್ಲಿ ಗುಂಡಿಯನ್ನು ತೆಗೆದು ಗುಂಡಿಯನ್ನು ಹಾಗೆಯೇ ಬಿಟ್ಟಿರುವುದಾಗಿ ಸಭೆಯಲ್ಲಿ ತಿಳಿಸಿದರು. ಇದರಿಂದ ಸಾರ್ವಜನಿಕರಿಗೆ, ಮಕ್ಕಳಿಗೆ ಮತ್ತು ಹಿರಿಯ ನಾಗರೀಕರಿಗೆ ರಸ್ತೆಯಲ್ಲಿ ಓಡಾಡಲು ತೊಂದರೆಯಾಗುತ್ತಿರುವ ಬಗ್ಗೆ ತಿಳಿಸಿದರು.

7. <u>ಪೋಲೀಸ್ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು</u>

- ವಾರ್ಡ್ ವ್ಯಾಪ್ತಿಯಲ್ಲಿ ಟ್ರಾಫಿಕ್ ಸಮಸ್ಯೆ ಹೆಚ್ಚಾಗಿ ಇರುವುದಾಗಿ ಸಭೆಯಲ್ಲಿ ತಿಳಿಸಿದರು.
- ಮಾಗಡಿ ಮುಖ್ಯರಸ್ತೆಯಲ್ಲಿ ಟ್ರಾಫಿಕ್ ಸಮಸ್ಯೆ ತುಂಬಾ ಇರುವುದರಿಂದ ಸಿಂಗ್ನಲ್ ಅಳವಡಿಸುವುದು ಮತ್ತು ಪೋಲೀಸ್ ಪೇದೆಯನ್ನು ನೇಮಿಸುವುದಾಗಿ ಸಭೆಯಲ್ಲಿ ಮಾತನಾಡಿದರು.

8. <u>ತೋಟಗಾರಿಕೆ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು</u>

- ತೋಟಗಾರಿಕೆ ಇಲಾಖೆಯಲ್ಲಿ ಎಷ್ಟು ಪಾರ್ಕ್‌ಗಳು ಇದವೆ ಮತ್ತು ಎಷ್ಟು ಗ್ರೌಂಡ್‌ಗಳು ಇದವೆ ಎಂಬುದರ ಮಾಹಿತಿ ನೀಡಲು ಕೋರಿದೆ.
- ಉದ್ಯಾನವನಗಳಲ್ಲಿ ಮಕ್ಕಳಿಗೆ ಪ್ಲೇಗ್ರೌಂಡ್ ಇರಬೇಕು ಎಂದು ಸಭೆಯಲ್ಲಿ ತಿಳಿಸಿದರು.

**ಅಧ್ಯಕ್ಷರು ಮಾತನಾಡಿ ಎಲ್ಲಾ ಅಧಿಕಾರಿಗಳು ಮತ್ತು ಎಲ್ಲ ಇಲಾಖಾ ಅಧಿಕಾರಿಗಳು ಮುಂದಿನ ವಾರ್ಡ್ ಕಮಿಟಿ ಸಭೆಗೆ ಕಡ್ಡಾಯವಾಗಿ ಹಾಜಾರಾಗಬೇಕೆಂದು ತಿಳಿಸುತ್ತಾ, ಹಾಜರಿಲ್ಲದ ಅಧಿಕಾರಿಗಳ ವಿರುದ್ದ ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆಯಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.**

**<u>ವಂದಾನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.</u>**

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 30. ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ವಾರ್ಡ್ ಕಮಿಟಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ 30 ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
28/11

<u>ಪ್ರತಿಯನ್ನು:-</u>

<u>ಅಧಿಕಾರಿಗಳ ಮಾಹಿತಿಗಾಗಿ</u>

1. ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ. ರವರ ಆಪ್ತಶಾಖೆಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು, ರಾ.ರಾ.ನಗರ ವಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ರಾ.ರಾ.ನಗರ ವಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು, ರಾ.ರಾ.ನಗರ ವಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಸಲ್ಲಿಸಿದೆ.
6. ಉಪ ನಿಯಂತ್ರಕರು (ಹಣಕಾಸು), ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಕೆಂ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
8. ಆರೋಗ್ಯ ವೈದ್ಯಾಧಿಕಾರಿಗಳು ಯಶವಂತಪುರ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ನಿರ್ದೇಶಕರು, (ಪಶು ಸಂಗೋಪನೆ) ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ರವರ ಮಾಹಿತಿಗಾಗಿ ಕಳುಹಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
14. ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.72, ಹೇರೋಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
15. ಪೋಲೀಸ್ ಇನ್ಸ್‌ಪೆಕ್ಟರ್, ಬ್ಯಾಡರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
16. ಅಧೀಕ್ಷಕರು (ಪಾರ್ಕ್‌ಗಳ ನಿರ್ವಹಣೆ) ತೋಟಗಾರಿಕೆ ಇಲಾಖೆ ರವರ ಮಾಹಿತಿಗಾಗಿ ಕಳುಹಿಸಿದೆ.

Scanned with OKEN Scanner